# ಪಿರಮಿಡ್ ಕಾಲ್ ಸರ್ವೀಸಸ್ ಬೆಂಗಳೂರು

ಒಂದೇ ಒಂದು ಫೋನ್ ಕಾಲ್
ನಿಮ್ಮ ಸಂಪೂರ್ಣ ಜೀವನವನ್ನು ಬದಲಾಯಿಸಬಹುದು...!

# ವಾರ್ತಾ ಪತ್ರ - ಜನವರಿ 2022

## ಸಂಸ್ಥಾಪಕರ ಸಂದೇಶ



## 'ಜೀವನ ಒಂದು ಆಟವಷ್ಟೇ'

ಆತ್ಮಜ್ಞಾನ ಇಲ್ಲದವರಿಗೆ 'ಜೀವನ' ಎಂದರೆ ಒಂದು 'ದುರ್ಭರವಾದ, ಘೋರವಾದ ಯುದ್ಧ'ದ ಹಾಗೆ ಭಾಸವಾದರೆ, ಒಬ್ಬ ಆತ್ಮಜ್ಞಾನಿಗೆ ಅವನ 'ಆತ್ಮೋನ್ನತಿಗಾಗಿ ಆಡುವ ಒಂದು ಮಹಾಕ್ರೀಡೆ' ಯಂತೆ ಭಾಸವಾಗುತ್ತದೆ.

ಪ್ರಾಪಂಚಿಕತೆಯಲ್ಲಿ ಪೂರ್ತಿಯಾಗಿ ಬಿದ್ದು ಆತ್ಮಜ್ಞಾನ ಲೋಪದಿಂದ ಕೂಡಿ 'ಜೀವನವೆಂದರೆ ಒಂದು ಆಟ ಮಾತ್ರವೇ' ಎಂಬ ವಿಷಯವನ್ನು ಮರೆತಾಗ... ನಮಗೆ ಎದುರಾಗುವ ಎಲ್ಲಾ ಸಮಸ್ಯೆಗಳು ಹಾಗೂ ಸವಾಲುಗಳು ನಮಗಿಂತ ಬೃಹತ್ತಾಗಿ ಭೂತಗಳಂತೆ ನಮ್ಮನ್ನು ಹೆದರಿಸುತ್ತವೆ.

ಅದೇ ನಾವು ಸರಿಯಾದ ಆಧ್ಯಾತ್ಮಿಕ ದಾರಿಯಲ್ಲಿ ಪಯಣಿಸುತ್ತಾ ಆತ್ಮಜ್ಞಾನ ಪ್ರಕಾಶಕರಾಗಿ ಪರಿವರ್ತನೆಗೊಂಡು ಸಮಸ್ಯೆಗಳನ್ನು ಸರಿಯಾದ ಅರಿವಿನಿಂದ ಅರ್ಥೈಸಿಕೊಂಡಾಗ, ಇನ್ನು ಸಮಸ್ಯೆಗಳೆಲ್ಲವೂ ನಮಗಿಂತ ತುಂಬಾ ಚಿಕ್ಕದಾಗಿ ಬದಲಾಗುತ್ತವೆ. ಹಾಗೂ ಅವುಗಳ ಪರಿಷ್ಕಾರಗಳು ನಮಗೆ ಸುಲಭವಾಗಿ ಸಿಗುತ್ತವೆ.

**ಬ್ರಹ್ಮರ್ಷಿ ಪಿತಾಮಹ ಪತ್ರೀಜಿ**

## ಮುಖ್ಯ ಮಾರ್ಗದರ್ಶಕರ ಸಂದೇಶ

## ಅಕ್ಷರ ಜ್ಞಾನ ಪ,ಫ,ಬ,ಭ,ಮ ಪರಿಕಲ್ಪನೆ

ಅಕ್ಷರ ಜ್ಞಾನ ಅಂದರೆ ನಾಶವಿಲ್ಲದ್ದು Imperishable
ಅ+ಕ್ಷರ = ಅ+ನಾಶಹೊಂದುವುದು, ಅಂದರೆ ಅಮೃತಮಯ, ನಾಶವಿಲ್ಲದ್ದು, ಯಾವಾಗಲೂ ಅಸ್ತಿತ್ವದಲ್ಲಿರುವುದು, ಆತ್ಮ ಸ್ಥಿತಿ, ಅಕ್ಷರ ವಿದ್ಯೆ ಅಂದರೆ ನಾಶವಿಲ್ಲದ ವಿದ್ಯೆ, ನಾಶವಿಲ್ಲದ ಜ್ಞಾನ ಅದೇ ಆತ್ಮ ಜ್ಞಾನ. ನಮ್ಮ ಕರ್ನಾಟಕದ ಕನ್ನಡ ಭಾಷೆಯ ಅಕ್ಷರ ವರ್ಗದಲ್ಲಿರುವ ಪ,ಫ,ಬ,ಭ,ಮ ಅಕ್ಷರ ಮಾಲೆಯ ಜ್ಞಾನ ಪರಿಕಲ್ಪನೆಯನ್ನು (concept) ತಿಳಿಯೋಣ.

**ಪ: ಪರಿತಪಿಸದೇ ಇರುವುದು/ದುಃಖ ರಾಹಿತ್ಯ,** **ಫ: ಫೇನೋ=ಪರಿಶ್ರಮ/ಸಾಧನೆ ಮಾಡುವುದು.**
**ಬ: ಬಂಧನ ರಾಹಿತ್ಯ,** **ಭ: ಭಯ ರಾಹಿತ್ಯ, ಮ: ಮೃತ್ಯು ರಾಹಿತ್ಯ (ಜನ್ಮ ರಾಹಿತ್ಯ)**

1. ಪ: ವಿವಿಧ ದೇಶ, ಕಾಲ ಪರಿಸ್ಥಿತಿಗಳಲ್ಲಿ ಪರಿತಪಿಸದಿರುವುದು, ದುಃಖ ಪಡದಿರುವುದು. ನೋವು, ಬೇಸರ, ರೋಗ, ಚಿಂತೆ, ಕೊರಗು, ಸೋಮಾರಿತನ ಇಲ್ಲದೆ ರೋಗ ರಾಹಿತ್ಯ, ದುಃಖ ರಾಹಿತ್ಯ ಸ್ಥಿತಿಯಲ್ಲಿ ಜೀವಿಸುವುದು. ಎಷ್ಟೇ ಪರಿಶ್ರಮ ಇದ್ದರೂ ದುಃಖ ರಾಹಿತ್ಯವಾಗಿ ಶ್ರಮಿಸಬೇಕು. ದುಃಖ-ಪರಿದುಃಖ ಮತ್ತು ಮಹಾ ಪರಿದುಃಖಗಳನ್ನು ಜಗತ್ತಿನಿಂದ ಹೋಗಿಸಿ ಜೀವಿಸುವುದು.
2. ಫ: ಫೇನೋ=ಪರಿಶ್ರಮ ಅಂದರೆ ಜೀವನದಲ್ಲಿ ಎಷ್ಟೇ ಶ್ರಮ/ಸಾಧನೆ, ಪರಿಶ್ರಮ/ಪರಿಸಾಧನೆ, ಮಹಾ ಪರಿಶ್ರಮ/ಮಹಾಪರಿಸಾಧನೆ ಪಡುತ್ತಿದ್ದರೂ ದುಃಖ ರಾಹಿತ್ಯ, ರೋಗ ರಾಹಿತ್ಯ, ಭಯ ರಾಹಿತ್ಯ, ಬಂಧನ ರಾಹಿತ್ಯ ಮತ್ತು ಮೃತ್ಯು ರಾಹಿತ್ಯ, ಜನ್ಮ ರಾಹಿತ್ಯಗಳೇ ಅಂತಿಮ ಗುರಿಗಳಾಗಬೇಕು.
3. ಬ: ಬಂಧನ ರಾಹಿತ್ಯ-ಆಸ್ತಿ, ಅಂತಸ್ತು, ಅಧಿಕಾರಕ್ಕೆ ಅಂಟಿಕೊಳ್ಳದೇ ಬಂಧು ಬಳಗವನ್ನು ಅಂಟಿಕೊಳ್ಳದೇ ಕರ್ತವ್ಯವನ್ನು ನಿಭಾಯಿಸಬೇಕು. ಬಂಧನ ರಹಿತ ಸ್ವ ಪೋಷಣೆ ಮತ್ತು ಪರ ಪೋಷಣೆ ಮಾಡಬೇಕು ಮತ್ತು ಹಾಗೆಯೆ ಜೀವಿಸಬೇಕು.
4. ಭ: ಭಯ:-ಭಯ ರಾಹಿತ್ಯ ಜೀವನದಲ್ಲಿ ಪರೀಕ್ಷೆಯ ಭಯ, ಹೊಸದನ್ನು ಸ್ವೀಕರಿಸುವ ಭಯ, ಜನರ ಮುಂದೆ ಮಾತನಾಡುವ ಭಯ, ದುಡಿಯುವ ಭಯ, ಮದುವೆಯ ಭಯ, ವಾಹನ ಚಾಲನೆಯ ಭಯ, ಈಜುವ ಭಯ ಇತ್ಯಾದಿಗಳು ಇರಬಾರದು.
5. ಮ: ಮೃತ್ಯು ರಾಹಿತ್ಯ/ಜನ್ಮ ರಾಹಿತ್ಯ ಅಂದರೆ ಆತ್ಮಾನುಭವ ಪಡೆದು ಆತ್ಮ ಸಾಕ್ಷಾತ್ಕಾರ ಪಡೆದು ಜ್ಞಾನೋದಯ ಹೊಂದಿ ಜನ್ಮ ರಾಹಿತ್ಯ ಸ್ಥಿತಿಯನ್ನು ತಲುಪಿದಾಗ ಜನನ ಮರಣಗಳ ಚಕ್ರದಿಂದ ಮುಕ್ತರಾಗುವುದು.

ಈ ಐದು ಅಂಶಗಳನ್ನು ಪ,ಫ,ಬ,ಭ,ಮ ಗಳನ್ನು ಸಾಧಿಸ ಬೇಕಾದರೆ ದಿನನಿತ್ಯ ಧ್ಯಾನ, ಸ್ವಾಧ್ಯಾಯ, ಸತ್ಸಂಗ, ಅಹಿಂಸಾ ಜೀವನ, ಶುದ್ಧ ಸಾತ್ವಿಕ ಆಹಾರ ಮತ್ತು ಪಿರಮಿಡ್ ಬಳಕೆ ಅವಶ್ಯಕ. ಈ ಆನಂದ ವಿದ್ಯೆಯನ್ನು ನಾವು ಅಭ್ಯಾಸ ಮಾಡೋಣ ಮತ್ತು ಎಲ್ಲರಿಗೂ ಕಲಿಸೋಣ.




**ಡಾ|| ಗಿರಿಸ್ವಾಮಿ ಹಳ್ಳದ**
MBBS,MS-OPH,FCAS
ನೇತ್ರ ಶಸ್ತ್ರ ಚಿಕಿತ್ಸ ತಜ್ಞರು

# ಅಂತರ್ಯಾನ



ಡಾ. ಜೀವಂಧರ ಕೇತಪ್ಪನವರ, ಚಿಕ್ಕೋಡಿ

ಸೀತಾಯಣ ಪುಸ್ತಕ ಬರೆದು ಮುಗಿಸಿದ ಮೇಲೆ, ಸೀತಾ ಮಾತೆಯ ಹೆಜ್ಜೆಗಳನ್ನು ಅರಸುತ್ತಾ ಕೋಲಾರ ಜಿಲ್ಲೆಯ ಆವನಿ ಬೆಟ್ಟಕ್ಕೆ ಟ್ರೆಕ್ಕಿಂಗ್ ಹೋದಾಗ, ಅಂತರ್ಯಾನ ಕಾರ್ಯಕ್ರಮ ಮಾಡುವ ಆಲೋಚನೆ ಬಂತು, ದಿನಾಂಕವೂ ಘೋಷಣೆಯಾಯಿತು. ವಸುಂಧರಾ ವಾರಿಯರ್ಸ್ ಅಂತರ್ ಬಳಗದ ಸಮರ್ಪಣಾ ಭಾವದ ಸತತ ಸೇವೆಯೊಂದಿಗೆ ಕಾರ್ಯಕ್ರಮವು ರೂಪ ತಳೆಯಿತು. ಅಂದುಕೊಂಡಂತೆ ಎಲ್ಲ ಅತಿಥಿ (guest speakers) ಹಿರಿಯ ಮಾಸ್ಟರ್‌ಗಳು ನಿಗದಿತ ಸಮಯದಲ್ಲಿ ಬಂದು ಜ್ಞಾನವನ್ನು ನೀಡಿದರು. 41 ದಿನಗಳ ಅಂತರ್ಯಾನ ಕಾರ್ಯಕ್ರಮವು ನಿಜವಾಗಿಯೂ ಆತ್ಮೋನ್ನತಿಯ ಮಾರ್ಗದಲ್ಲಿ ಒಂದು ಮೈಲುಗಲ್ಲಾಯಿತು. ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸಿದ ಟೀಮಿನ ಪ್ರತಿಯೊಬ್ಬ ಸದಸ್ಯರಿಗೂ, ಪಿರಮಿಡ್ ಕಾಲ್ ಸರ್ವಿಸ್ ಬೆಂಗಳೂರು ಬಳಗಕ್ಕೂ ಅನಂತ ಕೃತಜ್ಞತೆಗಳು.



D M ಪ್ರಭಾವತಿ, ಚೆನ್ನೈ



ಅಂತರ್ಯಾನ(INNER JOURNEY) ಕಾರ್ಯಕ್ರಮವು ಕನ್ನಡ ಭಾಷೆಯಲ್ಲಿ ಒಂದು ಸಂಚಲನವನ್ನು ಉಂಟು ಮಾಡಿತು. ಸಾಮಾನ್ಯವಾಗಿ 1 ಗಂಟೆ ಧ್ಯಾನಕ್ಕೆ ಕುಳಿತುಕೊಂಡ ನಂತರ, ಧ್ಯಾನದಿಂದ ಎಚ್ಚರಗೊಳ್ಳುತ್ತಿದ್ದೆ. ಅಂತರ್ಯಾನ ಕಾರ್ಯಕ್ರಮವನ್ನು ಮುಗಿಸಿದ ಬಳಿಕ ನನಗೀಗ ಮೂರು ಗಂಟೆಗಳ ಸತತ ಧ್ಯಾನ ಮಾಡುವ ಸ್ಥಿತಿ ಬಂದಿರುವುದು ನನ್ನಲ್ಲಿ ಉಂಟಾದ ಮಹಾ ಪರಿವರ್ತನೆ. ಅಂತರ್ಯಾನ ಬಳಗಕ್ಕೆ ಅನಂತ ಕೃತಜ್ಞತೆಗಳು.

**- ರುದ್ರಪ್ಪ ಕುಂಬಾರ, 9591052314**



ಆಧ್ಯಾತ್ಮಿಕ ಅಣ್ವೇಷನೆಗೆ ಅಂತರ್ ಪ್ರಯಾಣವು ಸಹಕಾರಿ ಸಾಧನ. ಆತ್ಮವನ್ನು ಅರಿತು, ಅದರಲ್ಲೆ ಬೆರೆತು ಸ್ಥಿರತೆಯನ್ನು ಪಡೆಯುವದೇ ಜೀವನದ ಮುಖ್ಯ ಧ್ಯೇಯ.ತನ್ನನ್ನು ತಾನು ಅರಿಯಲು, ಎಲ್ಲ ಸಿದ್ಧಿಯನ್ನು ಪಡೆಯಲು ಪ್ರತಿಯೊಬ್ಬರೂ ಪ್ರತಿ ದಿನ ಧ್ಯಾನವನ್ನು ಮಾಡಬೇಕು. ಅದಕ್ಕೆ ವಸುಂಧರಾ ವಾರಿಯರ್ಸ್ ಗ್ರೂಪ್  ಹಾಗೂ ಪಿರಮಿಡ್ ಕಾಲ್ ಸರ್ವೀಸೆಸ್ ಬೆಂಗಳೂರಿನ  ಝೂಮ್ ಕ್ಲಾಸ್ ಪ್ರಮುಖ ವೇದಿಕೆಯಾಗಿತ್ತು. ಕನ್ನಡದಲ್ಲಿ ಪ್ರಪ್ರಥಮ ಬಾರಿಗೆ ಮೂಡಿಬಂದಿರುವ ಅಂತರ್ಯಾನ ಕಾರ್ಯಕ್ರಮವು ಕನ್ನಡ ಭಾಷೆಯಲ್ಲಿ ಒಂದು ಹೊಸ ಅಲೆಯನ್ನು ಸೃಷ್ಟಿಸಿತು. ಅಂತರ್ಯಾನ ಟೀಮ್ ಗೆ ಅಭಿನಂದನೆಗಳು.

**- ಪ. ಪೂ. ಶ್ರೀ ಡಾ.ಅಭಿನವ ಬ್ರಹ್ಮಾನಂದ ಮಹಾಸ್ವಾಮಿಗಳು, 9980078057**



ಅಂತರ್ಯಾನ ಕಾರ್ಯಕ್ರಮದಲ್ಲಿ ಭಾಗವಹಿಸಿದ ಬಳಿಕ ನನ್ನ ಚರ್ಮರೋಗ ಮತ್ತು ತಲೆನೋವು ಸಂಪೂರ್ಣವಾಗಿ ವಾಸಿಯಾದವು! 15 ವರ್ಷಗಳ ಹಿಂದೆ ದೇಹತ್ಯಾಗ ಮಾಡಿದ ನನ್ನ ತಂದೆಯವರನ್ನು ನಾನು ಸಂಪರ್ಕಿಸಿ ಅವರೊಂದಿಗೆ ಮಾತನಾಡಲು ಸಾಧ್ಯವಾಯಿತು. ಈಗ ನಾನು ಸೊಳ್ಳೆ, ಇರುವೆ ಮುಂತಾದ ಕೀಟಗಳೊಂದಿಗೆ ಕೂಡ ಸಂಭಾಷಿಸಲು ಸಾಧ್ಯವಾಗಿದೆ! ಭೌತಿಕ ಜೀವನದಲ್ಲಿಯೂ ವಿಶೇಷ ಅನುಭವಗಳಾಗುತ್ತಿವೆ. ಅಂತರ್ಯಾನ ಬಳಗಕ್ಕೆ ಹೃತ್ಪೂರ್ವಕ ಕೃತಜ್ಞತೆಗಳು.

**- ಲಕ್ಷ್ಮಿ ಯಂಗಿ, 7259805117**

## "ನೈತಿಕ ಮತ್ತು ಯೋಗ ಶ್ರೇಷ್ಠತೆ ಲೆವಲ್ – 1 " ಸರ್ಟಿಫಿಕೇಟ್ ಕೋರ್ಸ್




ಬ್ರಹ್ಮರ್ಷಿ
ಡಾ.ಬಿ. ಶಿವರಾಮಪ್ಪ Phd

ಪಿರಮಿಡ್ ಸ್ಪಿರಿಚ್ಯುವಲ್ ಸೈನ್ಸ್ ಅಕಾಡೆಮಿ ವತಿಯಿಂದ ಡಾ ಬಿ.ಶಿವರಾಮಪ್ಪ ಸಾರ್ PCSB ಪ್ಲಾಟ್‌ಫಾರ್ಮ್‌ನಲ್ಲಿ "ನೈತಿಕ ಮತ್ತು ಯೋಗ ಶ್ರೇಷ್ಠತೆ ಲೆವಲ್ – 1" ಸರ್ಟಿಫಿಕೇಟ್ ಕೋರ್ಸ್ ನಡೆಸಿ ಕೊಟ್ಟಿದ್ದಾರೆ. ಈ ಒಂದು ಸರ್ಟಿಫಿಕೇಟ್ ಕೋರ್ಸ್ ಬಹಳ ಉತ್ತಮ ರೀತಿಯಲ್ಲಿ ಮಕ್ಕಳಿಗೆ ಮತ್ತು ಹಿರಿಯರಿಗೆ ಅರ್ಥವಾಗುವ ರೀತಿಯಲ್ಲಿ ಆಧ್ಯಾತ್ಮಿಕ ಶಾಸ್ತ್ರದ ಎಷ್ಟೋ ವಿಷಯಗಳು ಮತ್ತು ವಿಚಾರಗಳು ಪಿಪಿಟಿ ಮತ್ತು ವಿಡಿಯೋಗಳ ಮುಖಾಂತರ ಸವಿಸ್ತಾರವಾಗಿ ಅನೇಕ ಉದಾಹರಣೆಗಳು ಕೊಟ್ಟು ತಿಳಿಸಿಕೊಟ್ಟಿದ್ದಾರೆ. ಈ ಕಾರ್ಯಕ್ರಮದಲ್ಲಿ ಬಹಳಷ್ಟು ಮಾಸ್ಟರ್ಸ್ ಭಾಗವಹಿಸಿ ಇದರ ಲಾಭವನ್ನು ಪಡೆದಿದ್ದಾರೆ. ಕೊನೆಗೆ 50 ಜನ ಮಾಸ್ಟರ್ಸ್ ಪರೀಕ್ಷೆಗೆ ಹಾಜರಾಗಿ ಸರ್ಟಿಫಿಕೆಟನ್ನು ಪಡೆದಿದ್ದಾರೆ.



ಈ ಕೋರ್ಸ್ ನಮಗೆ ಅತ್ಯುತ್ತಮವಾದ ಜ್ಞಾನವನ್ನು ನೀಡಿತು. ಅಧ್ಯಾತ್ಮಿಕ ಜೀವನವನ್ನು ಹೇಗೆ ನಡೆಸಬೇಕು ಎಂಬುದನ್ನು ಸವಿಸ್ತಾರವಾಗಿ ತಿಳಿಸಿದರು. ಧ್ಯಾನ ಮಾಡಿದರೆ ನಮಗೆ ಎಂತಹ ಜ್ಞಾನ ಸಿಗುತ್ತೆ ಎನ್ನುವುದನ್ನು ತಿಳಿಸಿಕೊಟ್ಟಿದ್ದೀರಿ. ಈ ಕೋರ್ಸ್ ಮುಖಾಂತರವಾಗಿ ನಾನು ಧ್ಯಾನ, ಜ್ಞಾನ ಮತ್ತು ನನ್ನಲ್ಲಿ ಅಡಗಿರುವ ಅಪರಿಮಿತವಾದ ಶಕ್ತಿ ಎಲ್ಲವನ್ನು ತಿಳಿದುಕೊಳ್ಳಲು ಸಹಾಯವಾಯಿತು. ಕರ್ಮ ಸಿದ್ಧಾಂತ, ಕುಂಡಲಿನಿ ಶಕ್ತಿ, ಆಹಾರ ಕ್ರಮ  ಮತ್ತು ನಾನು ಯಾರು? ನಾನು ಏತಕ್ಕಾಗಿ ಈ ಜಗತ್ತಿಗೆ ಬಂದಿದ್ದೇನೆ? ನಾನು ಮುಂದೆ ಏನು ಮಾಡಬೇಕು? ಎನ್ನುವ ಜ್ಞಾನವನ್ನು ತಿಳಿಸಿಕೊಟ್ಟಂತಹ ಶಿವರಾಮಪ್ಪ ಸರ್ ರವರಿಗೆ ಕೋಟಿ  ಧನ್ಯವಾದಗಳು.

**- ಕುಮಾರಸ್ವಾಮಿ, H.G 7892964069**



ಈ  ಕೋರ್ಸ್ ನಲ್ಲಿ ಆಧ್ಯಾತ್ಮಿಕ ಜೀವನ ಹೇಗೆ ನಡೆಸಬೇಕು, ಮಧ್ಯೇ ಮಾರ್ಗದಲ್ಲಿ ಹೇಗೆ ಇರಬೇಕು, ಡಿವೈನ್ ಮಾಟ್ರಿಕ್ಸ್ ಬಗ್ಗೆ ಹೇಳಿಕೊಟ್ಟರು. ಎಷ್ಟೋ ಮಾಸ್ಟರ್ಸ್ ನಮಗೆ ಪರಿಚಯ ಆಯಿತ್ತು.ಲೋಬ್ ಸಾಂಗ್ ರಾಂಪಾ, ಮಹಾವತಾರ್ ಬಾಬಾಜಿ, ಚುವಾಂಗ್ಸು, ಇವರ ವಿಚಾರಗಳು ಮತ್ತು ಇವರ ಜ್ಞಾನ ಎಲ್ಲವನ್ನು ನಮಗೆ ತುಂಬಾ ಚೆನ್ನಾಗಿ ಹೇಳಿಕೊಟ್ಟರು. ನನ್ನ ಲೈಫ್ ಹೇಗೆ ಲೀಡ್ ಮಾಡಬೇಕು ಅನ್ನುವುದು ನನಗೆ ಈವಾಗ ಗೊತ್ತಾಗಿದೆ, ನನ್ನ  ಜೀವನದ ಬಗ್ಗೆ  ನನಗೆ  ಈಗ ಸ್ಪಷ್ಟತೆ ದೊರಕಿದೆ. ಶಿವರಾಮಪ್ಪ ಸಾರ್ ಗೆ, ಅನಿತ ಪಿಂಡಿ ಮೇಡಮ್ ಗೆ ತುಂಬಾ ಥಾಂಕ್ಸ್ ಹೇಳ್ತೀನಿ.

**- ದೀಕ್ಷಿತ್ ವಿಶ್ವಕರ್ಮ R, ತುಮಕೂರು, 6362459705**

# ಮಕ್ಕಳಿಗೆ ಧ್ಯಾನ ಕಾರ್ಯಕ್ರಮ

**PCSB ಪ್ಲಾಟ್‌ಫಾರ್ಮ್‌ನಲ್ಲಿ ಮಕ್ಕಳಿಗೆ ಪ್ರತಿ ಸೋಮವಾರ, ಮಂಗಳವಾರ ಮತ್ತು ಬುಧವಾರ ರಾತ್ರಿ 7ರಿಂದ 8 ರವರೆಗೆ ಧ್ಯಾನ ಕಾರ್ಯಕ್ರಮ ನಡೆಯುತ್ತದೆ. ಹಲವಾರು ಮಕ್ಕಳು ಸಸ್ಯಾಹಾರಿಗಳಾಗಿ, ಧ್ಯಾನ ಮಾಡುತ್ತಾ, ಹಲವಾರು ಕಲೆಗಳನ್ನು ಕಲಿಯುತ್ತಾ ಈ ಕಾರ್ಯಕ್ರಮದ ಉಪಯೋಗವನ್ನು ಪಡೆಯುತ್ತಿದ್ದಾರೆ. ಪ್ರತಿ ಭಾನುವಾರ ಮಧ್ಯಾಹ್ನ 12ರಿಂದ 1ರವರೆಗೆ ಮಕ್ಕಳು ಅವರು ಕಲೆತಿದ್ದನ್ನು ಹಂಚಿಕೊಳ್ಳುತ್ತಾರೆ. ಇದರಿಂದ ಅವರಲ್ಲಿ ಆತ್ಮ ವಿಶ್ವಾಸ ಹೆಚ್ಚಾಗುತ್ತದೆ.**





ನಾನು ಒಂದು ವರ್ಷದಿಂದ ಅನಿತಾ ಮೇಡಮ್ ಮತ್ತು ಶ್ರೀಪಾದವಲ್ಲಿ ಮೇಡಮ್ ರವರ ಧ್ಯಾನ ತರಗತಿಗಳನ್ನು ತಪ್ಪದೇ ಹಾಜರುಗುತ್ತೇನೆ. ಮತ್ತು ಧ್ಯಾನ ಮಾಡುತ್ತಿದ್ದೇನೆ. ಮುಂಚೆ ನನಗೆ 70% ಮಾರ್ಕ್ಸ್ ಬರುತ್ತಿತ್ತು ಧ್ಯಾನ ಮಾಡಿದ ನಂತರ ಈಗ ನನಗೆ 88% ಮಾರ್ಕ್ಸ್ ಬರುತ್ತಿದೆ. ಈಗ ನಾನು ಒಂದು ಬಾರಿ ಓದಿದರೆ ಪಾಠ ಚೆನ್ನಾಗಿ ನೆನಪಿರುತ್ತೆ. ನನ್ನಲ್ಲಿ ತುಂಬಾ ಸುಧಾರಣೆ ಆಗಿದೆ. ಈಗ ನಾನು ಶಾಲೆಯಲ್ಲಿ ನನ್ನ ಶಿಕ್ಷಕರು ಮತ್ತು ನನ್ನ ಸಹಪಾಠಿಗಳೊ0ದಿಗೆ ತುಂಬಾ ಖುಷಿಯಿ0ದ ಇದ್ದೇನೆ. ಧನ್ಯವಾದಗಳು.


**- ಸ್ವಾತಿ**
**ಕೇಂದ್ರೀಯ ವಿದ್ಯಾಲಯ, ಚಿಕ್ಕೋಡಿ**

# PCSB ಚಾನಲ್ ವಿಶ್ಲೇಷಣೆ

| Subscribers | Views | Uploads |
|---|---|---|
| 8,910 | 1,253,613 | 2,320 |






# ವಾರ್ತಾಪತ್ರ - ಸಹಕಾರ



**ಶ್ರೀ ವೆಂಕಟ್**



**ಕುಮಾರಿ ರೆಹನಶ್ರಿ**



**ಶ್ರೀಮತಿ ರಜಿತ ಕೀರ್ತಿ**

## ಅನಿಸಿಕೆಗಳು



ಬ್ರಹ್ಮರ್ಷಿ ಪಿತಾಮಹ ಸುಭಾಷ್ ಪತ್ರೀಜಿಯವರ ಬೃಹತ್ ಆಶಯಕ್ಕಾಗಿ ಕಾರ್ಯ ನಿರ್ವಹಿಸುತ್ತಿರುವ ಪಿರಮಿಡ್ ಕಾಲ್ ಸರ್ವೀಸೆಸ್ (PCSB)ಗೆ ನನ್ನ ಅನಂತಕೋಟಿ ನಮನಗಳು. PCSB, 'ಧ್ಯಾನಾಸಕ್ತರು' ಮತ್ತು 'ಧ್ಯಾನವನ್ನು ತಿಳಿಸುತ್ತಿರುವ' ಇಬ್ಬರ ನಡುವೆಯೂ ಒಂದು ಸೇತುವೆಯಾಗಿ ತನ್ನ ಕಾರ್ಯವನ್ನು ಅದ್ಭುತವಾಗಿ ನಿರ್ವಹಿಸುತ್ತಿದೆ. ಇಂತಹ ಅಪೂರ್ವ ಅವಕಾಶವನ್ನು ಸಮಸ್ತ ಮನುಕುಲವು ಉಪಯೋಗಿಸಿಕೊಂಡು 'ಧ್ಯಾನಜಗತ್', 'ಶಾಕಾಹಾರ ಜಗತ್' ಮತ್ತು 'ಪಿರಮಿಡ್ ಜಗತ್' ಸೃಷ್ಟಿಸುವಲ್ಲಿ ಸಹಕಾರಿಯಾಗಬೇಕಾದ್ದು ನಮ್ಮೆಲ್ಲರ ಕರ್ತವ್ಯವಾಗಿದೆ.

**- ರೂಪ ವೆಂಕಟೇಶ್**
**'ಸತ್ಯಪಯಣ' ಪುಸ್ತಕದ ಲೇಖಕಿ**



'ಪಿರಮಿಡ್ ಕಾಲ್ ಸರ್ವೀಸೆಸ್ ಬೆಂಗಳೂರು' ನೊಂದಿಗೆ ಸುಮಾರು ಎರಡು ವರ್ಷಗಳಿಂದ ಒಡನಾಟ ರಜಿತ ಮೇಡಮ್ ಮುಖಾಂತರ. ನಾನು ಪಡೆದ ಜ್ಞಾನವನ್ನು ಅದನ್ನು ನನ್ನ ಜೀವನದಲ್ಲಿ ಅಳವಡಿಸಿ ನೀಡಿದ ಲಾಭವನ್ನು ಈ 'ಪಿರಮಿಡ್ ಕಾಲ್ ಸರ್ವೀಸೆಸ್ ಬೆಂಗಳೂರು' ಪ್ಲಾಟ್ ಫಾರ್ಮ್‌ನಲ್ಲಿ ವ್ಯಕ್ತ ಪಡಿಸಲು ನನ್ನ 'ಹೈಯರ್ ಸೆಲ್ಫ್'ನನಗೆ ಕೊಟ್ಟ ಉಡುಗೊರೆ ಅಂತಲೇ ನಾನು ಭಾವಿಸ್ತೀನಿ. ಕೃತಜ್ಞತೆಗಳು ! ಕೃತಜ್ಞತೆಗಳು! ಕೃತಜ್ಞತೆಗಳು!

**-ಶ್ರೀಮತಿ ಶೈಲಾ ಸತೀಷ್, ಚಿಂತಾಮಣಿ**
**ಸೀನಿಯರ್ ಪಿರಮಿಡ್ ಮಾಸ್ಟರ್**



PCSB ನಲ್ಲಿ ಪ್ರಸಾರವಾಗುತ್ತಿರುವ ಕಾರ್ಯಕ್ರಮಗಳನ್ನು ವೀಕ್ಷಿಸಿದ ಸಾವಿರಾರು ಜನರು ಧ್ಯಾನಿಗಳಾಗಿದ್ದಾರೆ ಮತ್ತು ಸಸ್ಯಾಹಾರಿಗಳಾಗಿ ಬದಲಾಗಿದ್ದಾರೆ. ತಮ್ಮ ಮನೆಗಳಲ್ಲಿಯೇ ಇದ್ದು ಬೆಳಿಗ್ಗೆ ಮತ್ತು ರಾತ್ರಿ ಪ್ರಸಾರವಾಗುವ ಸಂಗೀತ ಮಾರ್ಗದರ್ಶನ ಧ್ಯಾನವನ್ನು ಮಾಡುತ್ತ ತಮ್ಮ ಧ್ಯಾನಸ್ಥಿತಿ ಮತ್ತು ಚೈತನ್ಯ ಶಕ್ತಿಯನ್ನು ವೃದ್ಧಿಸಿಕೊಳ್ಳುವರೊಂದಿಗೆ, ಸತ್ಸಂಗಗಳ ವೀಕ್ಷಣೆಯ ಮೂಲಕ ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳುತ್ತಾ, ತಮ್ಮ ಹಲವಾರು ಸಂಶಯಗಳನ್ನು ನಿವಾರಣೆ ಮಾಡಿಕೊಂಡು ಆಧ್ಯಾತ್ಮಿಕ ಪ್ರಗತಿ ಹೊಂದುತ್ತಿದ್ದಾರೆ. ಮಕ್ಕಳಿಗೆ/ವಿದ್ಯಾರ್ಥಿಗಳಿಗೆ ನಡೆಸಲಾಗುವ ಕಾರ್ಯಕ್ರಮಗಳಿಂದ ಅವರಿಗೆ ಒಳ್ಳೆಯ ಜೀವನದ ಅಡಿಪಾಯ ಲಭ್ಯವಾಗುತ್ತಿದ್ದು ಅವರ ಶೈಕ್ಷಣಿಕ ಪ್ರಗತಿ ಮತ್ತು ನಡವಳಿಕೆ ಉತ್ತಮವಾಗುತ್ತಿದೆ.

**-ಸಂಧ್ಯಾ ವೆಂಕಟೇಶ್**
**'ಧ್ಯಾನ ಕಸ್ತೂರಿ' ಮಾಸಪತ್ರಿಕೆಯ ಸಂಪಾದಕರು**

## ಮುಂಬರುವ ಕಾರ್ಯಕ್ರಮಗಳು

- ಬ್ರಹ್ಮರ್ಷಿ ಡಾ.ಬಿ. ಶಿವರಾಮಪ್ಪ Phd ರವರಿಂದ "ನೈತಿಕ ಮತ್ತು ಯೋಗ ಶ್ರೇಷ್ಠತೆ ಲೆವಲ್ – 2 "

20 ಗಂಟೆಗಳ – ಸಾಪ್ತಾಹಿಕ ಅಧಿವೇಶನ – ಫೆಬ್ರವರಿ 24, 2022 ರಿಂದ
ಪ್ರತೀ ಗುರು-ಶುಕ್ರ-ಶನಿವಾರ ಸಂಜೆ 6 ರಿಂದ 7 ಗಂಟೆಯವರೆಗೆ.
ನೊಂದಾಯಿಸಲು ಕರೆ ಮಾಡಬಹುದು (Ph: 9110689400)

- ಡಾ ಗಿರಿಸ್ವಾಮಿ ರವರಿಂದ

ಪ್ರತಿ ಶನಿವಾರ ಸಂಜೆ 6.00 – 7.30 ಗಂಟೆಯ ವರೆಗೆ 'ಜೀವನ ಯಾತ್ರೆ' ಸತ್ಸಂಗ ಮತ್ತು ಧ್ಯಾನ ಕಾರ್ಯಕ್ರಮ

## ನೇರ ಪ್ರಸಾರ ಕಾರ್ಯಕ್ರಮಗಳು

ಪಿರಮಿಡ್ ಕಾಲ್ ಸರ್ವೀಸಸ್ ಬೆಂಗಳೂರು (PCSB) ಒಂದು **ಲಾಭರಹಿತ ಸೇವಾ ಸಂಸ್ಥೆ** ಆಗಿರುತ್ತದೆ. ಧ್ಯಾನ ಪ್ರಚಾರವೇ ಇದರ ಮುಖ್ಯ ಉದ್ದೇಶವಾಗಿದೆ. ಜನರು ಮನೆಯಲ್ಲಿದ್ದುಕೊಂಡು, ಮೊಬೈಲ್ ಮೂಲಕ ಉಚಿತವಾಗಿ ಧ್ಯಾನ ಶಿಕ್ಷಣವನ್ನು ಪಡೆಯಬಹುದು. ಪ್ರತಿದಿನ 'ಪಿರಮಿಡ್ ಕಾಲ್ ಸರ್ವೀಸಸ್ ಬೆಂಗಳೂರು' Zoom ಮತ್ತು Youtube ಮೂಲಕ ಹಲವಾರು ವೈವಿಧ್ಯಮಯ ಕಾರ್ಯಕ್ರಮಗಳು ನಡೆಯುತ್ತಿವೆ.

**ಪ್ರತಿದಿನ ಬೆಳಗ್ಗೆ 5.00 – 6.30 ಗಂಟೆಯ ವರೆಗೆ ಮಾರ್ಗದರ್ಶನ ಸಂಗೀತನಾದ ಧ್ಯಾನ**
**ಪ್ರತಿದಿನ ಮಧ್ಯಾಹ್ನ 3.00 – 4.30 ಗಂಟೆಯ ವರೆಗೆ ಸತ್ಸಂಗ ಮತ್ತು ಧ್ಯಾನ ಕಾರ್ಯಕ್ರಮ**
**ಪ್ರತಿ ಶನಿವಾರ ಸಂಜೆ 6.00 – 7.30 ಗಂಟೆಯ ವರೆಗೆ 'ಜೀವನ ಯಾತ್ರೆ' ಸತ್ಸಂಗ ಮತ್ತು ಧ್ಯಾನ ಕಾರ್ಯಕ್ರಮ**
**ಪ್ರತಿ ಸೋಮವಾರ, ಮಂಗಳವಾರ ಮತ್ತು ಬುಧವಾರ ರಾತ್ರಿ 7.00 – 8.00 ಗಂಟೆಯ ವರೆಗೆ ಮಕ್ಕಳಿಗೆ ಧ್ಯಾನ ಕಾರ್ಯಕ್ರಮ**
**ಪ್ರತಿ ಭಾನುವಾರ ಸಂಜೆ 6.00 – 6.30ರ ವರೆಗೆ ಮಕ್ಕಳಿಗೆ ಭಗವದ್ಗೀತೆಯ ಕಾರ್ಯಕ್ರಮ**
**ಪ್ರತಿದಿನ ರಾತ್ರಿ 9.30 – 10.30 ಗಂಟೆಯ ವರೆಗೆ ಮಾರ್ಗದರ್ಶನ ಸಂಗೀತನಾದ ಧ್ಯಾನ**

ಸ್ಕೂಲ್, ಕಾಲೇಜು, ಆಫೀಸು ಮತ್ತು ಎಲ್ಲಿ ಯಾದರೂ ಯಾರಿಗಾದರೂ ಧ್ಯಾನ ಹೇಳಿಕೊಡಬೇಕಾದರೆ ಈ ಕೆಳಗೆ ಇರುವ ಪಿರಮಿಡ್ ಕಾಲ್ ಸರ್ವೀಸಸ್ ನಂಬರ್‌ಗೆ ಸಂಪರ್ಕಿಸಿ.

**YouTube Link:**
www.youtube.com/PyramidCallServicesBengaluru/live

**Join ZOOM Meeting:**
**Meeting ID**: 982 166 3558 | **Password**: 297628


**ಪಿರಮಿಡ್ ಕಾಲ್ ಸರ್ವೀಸಸ್ ಬೆಂಗಳೂರು**
ಧ್ಯಾನ ಕಲಿಕೆಗಾಗಿ ಈಗಲೇ ಕರೆಮಾಡಿ
**+91 99029 19058, +91 87224 97146, +91 97423 02833**
ದೂರವಾಣಿ ಮೂಲಕ ಉಚಿತ ಧ್ಯಾನ ಬೋಧನೆಗಾಗಿಯೇ ಮೀಸಲಾಗಿರುವ ತಂಡ